# ECE ಮಾರ್ಗದರ್ಶಿ ಸೂತ್ರಗಳು

# ಮಾರ್ಗದರ್ಶಿ ಸೂತ್ರಗಳೆಂದರೇನು?

- ECE ನ ಮಾರ್ಗದರ್ಶಿ ಸೂತ್ರಗಳು ವೈಜ್ಞಾನಿಕ ಸಂಶೋಧನೆ ಮತ್ತು ಜ್ಞಾನವನ್ನು ಆಧರಿಸಿವೆ. ಈ ಸಂಶೋಧನೆಗಳು ಮಕ್ಕಳ ಕಲಿಕೆಯ ವಿಧಾನಗಳ ಕುರಿತು ಮತ್ತು ನಾವು ಮಕ್ಕಳನ್ನು ನಿರ್ವಹಿಸುವ ಪ್ರಮುಖ ಸಾಂಸ್ಕೃತಿಕ ಮೌಲ್ಯಗಳ ಕುರಿತು ನಡೆಸಲಾಗಿದೆ.
- ಮಾರ್ಗದರ್ಶಿ ಸೂತ್ರಗಳು ಕಾರ್ಯಕ್ರಮದ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತವೆ- ಪಠ್ಯಕ್ರಮ, ಶಿಕ್ಷಕರ ವರ್ತನೆ, ತರಗತಿಯ ನಿರ್ವಹಣೆ, ಇತ್ಯಾದಿಗಳನ್ನೂ ಒಳಗೊಂಡಿರುತ್ತವೆ.
- ಒಂದು ಒಳ್ಳೆ ಶಾಲೆಯು ತಾನು ನೆಲೆಸಿರುವ ಸ್ಥಳವನ್ನು, ತನ್ನಲ್ಲಿ ಓದುವ ವಿದ್ಯಾರ್ಥಿಗಳನ್ನು ಅಥವಾ ತಾನು ಅನುಸರಿಸುವ ಶಿಕ್ಷಣಾ ವಿಧಾನವನ್ನು ಪರಿಗಣಿಸದೇ  ECE ಪಠ್ಯಕ್ರಮದ ಸೂತ್ರಗಳನ್ನು ಅನುಸರಿಸುತ್ತದೆ.

# ಕರ್ನಾಟಕದ ECE ಪಠ್ಯಕ್ರಮದಲ್ಲಿನ ಮಾರ್ಗದರ್ಶಿ ಸೂತ್ರಗಳು

- ಈ ಪಠ್ಯಕ್ರಮದ ಮಾರ್ಗದರ್ಶಿ ಸೂತ್ರಗಳನ್ನು DWCD ರಚಿತ ಪ್ರಿಸ್ಕೂಲ್ ಪಠ್ಯಕ್ರಮದ ಮಾರ್ಗಸೂಚಿಗಳಿಂದ ತೆಗೆದುಕೊಳ್ಳಲಾಗಿದೆ.
- ಯಾವುದೇ ECE ಕಾರ್ಯಕ್ರಮವು ಕಲಿಕೆಯನ್ನು ಈ ರೀತಿಯಾಗಿ ಪರಿಗಣಿಸುತ್ತದೆ:
  - ಕಲಿಕೆಯು ಸಮಗ್ರವಾಗಿದ್ದು ಬಹು ಆಯಾಮಗಳಿಂದ ಕೂಡಿರುತ್ತದೆ.
  - ಕಲಿಕೆಯು ನಿರಂತರವಾಗಿ ನಡೆಯುತ್ತದೆ ಮತ್ತು ಸಂಚಿತವಾಗಿರುತ್ತದೆ, ಮತ್ತು ಪ್ರತಿ ಮಗು ತನ್ನದೇ ಆದ ವಿಶಿಷ್ಟ ವೇಗದಲ್ಲಿ ಮತ್ತು ತನ್ನದೇ ಆದ ವಿಶಿಷ್ಟ ಕಲಿಕೆಯ ಶೈಲಿಯಲ್ಲಿ ಕಲಿಯುತ್ತದೆ.
  - ಆಟ, ಚಟುವಟಿಕೆಗಳು ಮತ್ತು ಶಿಕ್ಷಕರ, ಸಹಪಾಠಿಗಳ ಮತ್ತು ಪರಿಸರದೊಂದಿಗಿನ ಒಡನಾಟದ ಸಹಾಯದಿಂದ ಶಾಲಾಪೂರ್ವದ ವಯಸ್ಸಿನ ಮಕ್ಕಳು ಜ್ಞಾನವನ್ನು ಗಳಿಸುವುದು ಒಳ್ಳೆಯ ವಿಧಾನವಾಗಿದೆ.
  - ಕಲಿಕೆಯು ಬೆಳವಣಿಗೆಗೆ ಸೂಕ್ತವಾಗಿರಬೇಕು, ಸಂದರ್ಭಕ್ಕೆ ಪ್ರಸ್ತುತವಾಗಿರಬೇಕು ಮತ್ತು ಸಾಂಸ್ಕೃತಿಕವಾಗಿ ಸೂಕ್ತವಾಗಿರಬೇಕು.

# ಸೂತ್ರ 1 - ಕಲಿಕೆಯು ಸಮಗ್ರವಾಗಿದ್ದು ಬಹು ಆಯಾಮಗಳಿಂದ ಕೂಡಿರುತ್ತದೆ.

- ನರವಿಜ್ಞಾನ ಕುರಿತಾದ ಸಂಶೋಧನಾ ಅಧ್ಯಯನಗಳ ಪ್ರಕಾರ ಮಕ್ಕಳ ಬೆಳವಣಿಗೆಯ ಆಯಾಮಗಳಾದ ಅರಿವು, ಭಾಷೆ, ಚಲನಾ ಕೌಶಲ್ಯಗಳು, ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ ಮತ್ತು ಬೌದ್ಧಿಕ ಅಥವಾ ಅರಿವಿನ ಬೆಳವಣಿಗೆಯು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ.
- ಚಿಕ್ಕ ಮಕ್ಕಳು ಏಕಕಾಲದಲ್ಲಿ ಹಲವಾರು ಆಯಾಮಗಳಲ್ಲಿ ಅಭಿವೃದ್ಧಿ ಹೊಂದುತ್ತಾರೆ.
- ಪ್ರತಿ ಆಯಾಮವು ಎಲ್ಲಾ ಮಕ್ಕಳಿಗೂ ಸಮಾನವಾಗಿ ಮುಖ್ಯವಾಗುತ್ತದೆ.
- ಅಭಿವೃದ್ಧಿಯ ಆಯಾಮಗಳು ಪರಸ್ಪರ ಅವಲಂಬಿತವಾಗಿರುತ್ತವೆ ಮತ್ತು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ.

## ಪಠ್ಯಕ್ರಮದ ಸೂಚ್ಯಗಳು:

ಎಲ್ಲಾ ಅಭಿವೃದ್ಧಿ ಆಯಾಮಗಳೂ ಪರಸ್ಪರ  ಸಂಬಂಧ ಹೊಂದಿರುವ ಕಾರಣ, ಒಂದು ECCE ಕಾರ್ಯಕ್ರಮವು ಪ್ರತಿ ಮಗುವಿನ ಎಲ್ಲಾ ಬೆಳವಣಿಗೆಯ ಆಯಾಮಗಳಿಗೂ ಅವಕಾಶವನ್ನು ಕಲ್ಪಿಸುವಂತೆ ಸಮತೋಲವನ್ನು ಕಾಪಾಡಬೇಕು.

# ಆಲೋಚಿಸಿ:

- ECE ಯ ಪ್ರಭಾವದ ಸಂಶೋಧನೆಯಲ್ಲಿ ಪಠ್ಯಕ್ರಮದ ವಿಶ್ಲೇಷಣೆಯನ್ನು ಮತ್ತು 3 ವಿಭಿನ್ನ ರೀತಿಯ ಶಾಲಾಪೂರ್ವ ಕಾರ್ಯಕ್ರಮಗಳಲ್ಲಿ ಕಳೆಯಲಾದ % ಸಮಯವನ್ನು ಅಧ್ಯಯನ ಮಾಡಲಾಯಿತು.
- ಸಮಗ್ರ ಬೆಳವಣಿಗೆಯ ತತ್ವದ ಆಧಾರದ ಮೇಲೆ ನಿಮ್ಮ ಅನಿಸಿಕೆಯಲ್ಲಿ ಯಾವ ಕಾರ್ಯಕ್ರಮವು ಉತ್ತಮವಾಗಿದೆ ಮತ್ತು ಯಾಕೆ? ಚರ್ಚಿಸಿ ನಿರ್ಧಾರ ಮಾಡಿ.
- ನಿಮ್ಮ ಮಕ್ಕಳನ್ನು ನೀವು ಎಲ್ಲಿ ಕಳುಹಿಸುತ್ತೀರಿ? ಯಾಕೆ?
- ನಿಮ್ಮ ಅನಿಸಿಕೆಯ ಪ್ರಕಾರ ಪೋಷಕರು ತಮ್ಮ ಮಕ್ಕಳನ್ನು ಎಲ್ಲಿಗೆ ಕಳುಹಿಸುತ್ತಾರೆ?

## 3 ಕಾರ್ಯಕ್ರಮಗಳ ವಿಭಿನ್ನ ಚಟುವಟಿಕೆಗಳಲ್ಲಿ ಕಳೆದ % ಸಮಯ.

| ಚಟುವಟಿಕೆ | ಕಾರ್ಯಕ್ರಮ A | ಕಾರ್ಯಕ್ರಮ B | ಕಾರ್ಯಕ್ರಮ C |
|---|---|---|---|
| ಆಟವನ್ನು ಆಧರಿಸಿದ ಕಲಿಕಾ ಚಟುವಟಿಕೆಗಳು | 16.8 | 7.9 | 58.7 |
| ಹೊರಾಂಗಣ ಆಟದ ಚಟುವಟಿಕೆಗಳು | 1.4 | 1.1 | 3.7 |
| ಶಾಲೆಯ ಸಿದ್ಧತೆ ಚಟುವಟಿಕೆಗಳು | 1.4 | 0.2 | 2.8 |
| ಸಾಂಪ್ರದಾಯಿಕ ಬೋಧನೆ | 4.9 | 40.4 | 0.9 |
| ನಿತ್ಯಕ್ರಮ ಚಟುವಟಿಕೆಗಳು | 25.9 | 31.9 | 25.7 |
| ಯೋಜಿತವಲ್ಲದ ಚಟುವಟಿಕೆಗಳು | 22.4 | 3.2 | 3.7 |
| ಇತರೆ | 8.4 | 5.9 | 4.6 |
| ಯಾವುದೇ ಚಟುವಟಿಕೆ ಇಲ್ಲ | 18.9 | 9.3 | 1.8 |

## ಸೂತ್ರ 2: ಕಲಿಕೆಯು ನಿರಂತರವಾಗಿ ನಡೆಯುತ್ತದೆ ಮತ್ತು ಸಂಚಿತವಾಗಿರುತ್ತದೆ, ಮತ್ತು ಪ್ರತಿ ಮಗುವಿಗೆ ವಿಶಿಷ್ಟವಾಗಿರುತ್ತದೆ:

- ಕಲಿಕೆಯು ಹುಟ್ಟಿನಿಂದ ಆರಂಭವಾಗಿ ಜೀವನದ ಉದ್ದಕ್ಕೂ ನಿರಂತರವಾಗಿ ನಡೆಯುತ್ತದೆ.
- ಆರಂಭಿಕ ವರ್ಷಗಳಲ್ಲಿ ನಡೆಯುವ ವಿಚಾರಗಳು ನಂತರ ವರ್ಷಗಳ ಕಲಿಕೆಗೆ ಅಡಿಪಾಯವನ್ನು ಹಾಕುತ್ತವೆ.
- ಎಲ್ಲಾ ಮಕ್ಕಳ ಬೆಳವಣಿಗೆಯ ಅನುಕ್ರಮವು ಒಂದೇ ಆಗಿದ್ದರೂ ಪ್ರತಿ ಮಗುವು ತನ್ನದೇ ವೇಗದಲ್ಲಿ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ಗಳಿಸುತ್ತದೆ.
- ಅಲ್ಲದೆ, ಮಕ್ಕಳು ವಿಭಿನ್ನ ವಿಧಾನಗಳಲ್ಲಿ ಕಲಿಯುತ್ತಾರೆ-ಕೆಲವರು ಮೌಖಿಕ ಚಟುವಟಿಕೆಗಳ ಮೂಲಕ, ಕೆಲವರು ದೈಹಿಕ ಚಟುವಟಿಕೆಗಳ ಮೂಲಕ ಮತ್ತೆ ಕೆಲವರು ಕಲೆ ಮತ್ತು ಕರಕುಶಲ ಇತ್ಯಾದಿಗಳ ಮೂಲಕ ಕಲಿಯುತ್ತಾರೆ.

# ಆಲೋಚಿಸಿ:

- ಕೆಳಗಿನ ಸ್ಲೈಡ್‌ನಲ್ಲಿ ಓರ್ವ ಶಿಕ್ಷಕಿಯು ತನ್ನ ತರಗತಿಯ ಇಬ್ಬರು ಮಕ್ಕಳ ಬಗ್ಗೆ ಬರೆದಿರುವ ಟಿಪ್ಪಣಿಯನ್ನು ತೋರಿಸಲಾಗಿದೆ. ಮಾಸಿಕ PTA ಭೇಟಿಯ ಮುನ್ನ ಬರೆಯಲಾಗಿರುವ ಈ ಟಿಪ್ಪಣಿಯು ಮಕ್ಕಳ ಪೋಷಕರಿಗೆ ನೀಡಬೇಕಾಗಿರುವ ಸಲಹೆಗಳನ್ನು ಒಳಗೊಂಡಿದೆ. ರಾಹುಲ್ ಮತ್ತು ರೋಹನ್ ಇಬ್ಬರೂ ಮಕ್ಕಳ ತಾಯಂದಿರು ತಮ್ಮ ಮಕ್ಕಳ ಬಗ್ಗೆ ಶಿಕ್ಷಕರ ಮಾತುಗಳನ್ನು ಕೇಳಿ ಹೀಗೆ ಆಲೋಚಿಸಿದರು.

| ಮಗು A | ಮಗು B |
| --- | --- |
| ಈ ತಿಂಗಳ ತರಗತಿಯು 'ನಾನು, ನನ್ನ ಸ್ನೇಹಿತರು ಮತ್ತು ನನ್ನ ಭಾವನೆಗಳು' ಎನ್ನುವ ವಿಷಯವನ್ನು ಒಳಗೊಂಡಿತ್ತು.<br>ರಾಹುಲ್ ಒಬ್ಬ ಜಾಣ ಮತ್ತು ಸ್ಪಂದಿಸುವ ವಿದ್ಯಾರ್ಥಿಯಾಗಿದ್ದು ತನ್ನನ್ನು, ತನ್ನ ಸ್ನೇಹಿತರನ್ನು ಮತ್ತು ಕುಟುಂಬದವರನ್ನು ವಿವರಿಸುವ ಎಲ್ಲಾ ಸಂಭಾಷಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾನೆ. ಕಥೆ ಹೇಳುವ ಸಮಯದಲ್ಲಿ ಅವನು ಸಕ್ರಿಯವಾಗಿ ಆಲಿಸುತ್ತಾನೆ ಮತ್ತು ಕಥೆ ಸಂಬಂಧಿತ ಪ್ರಶ್ನೆಗಳಿಗೆ ಉತ್ತರಿಸುವವರಲ್ಲಿ ಮೊದಲಿಗನಾಗಿದ್ದಾನೆ.<br>ಆದರೆ, ಅವನು ಕಲೆ ಮತ್ತು ಕರಕುಶಲ ಕೆಲಸಗಳಲ್ಲಿ ಆಸಕ್ತಿ ವ್ಯಕ್ತಪಡಿಸುವುದಿಲ್ಲ. ಮತ್ತು ತನ್ನ ಅಥವಾ ಸ್ನೇಹಿತರ ಚಿತ್ರವನ್ನು ಚಿತ್ರಿಸಲು ಅಥವಾ ಬಣ್ಣ ಹಚ್ಚಲು ಅಥವಾ ಅಂಟಿಸಲು ನಿರಾಕರಿಸಿದನು. ಅವನಿಗೆ ಪೆನ್ಸಿಲ್ ಹಿಡಿಯಲು ಇಷ್ಟವಾಗುವುದಿಲ್ಲ. ಮತ್ತು ಅವನಿಗೆ ಮಾತನಾಡಲು ಅವಕಾಶ ನೀಡುವ ಚಟುವಟಿಕೆಯಲ್ಲಿ ಮಾತ್ರ ಆಸಕ್ತಿ ತೋರುತ್ತಾನೆ.<br>ಮನೆ ಅಲಂಕಾರ, ಕಲೆ ಮತ್ತು ಕರಕುಶಲ ಚಟುವಟಿಕೆಗಳಲ್ಲಿ ನೀವು ರಾಹುಲ್‌ನನ್ನು ತೊಡಗಿಸಿಕೊಂಡರೆ ಒಳ್ಳೆಯದು, ಇದರಿಂದ ಅವನು ತನ್ನ ಕೈಗಳನ್ನು ಬಳಸಲು ಕಲಿಯುತ್ತಾನೆ, ಅಲ್ಲದೆ, ಈ ಚಟುವಟಿಕೆಗಳನ್ನು ಅವನು ಆನಂದಿಸುತಾನೆ. | ಈ ತಿಂಗಳ ತರಗತಿಯು 'ನಾನು, ನನ್ನ ಸ್ನೇಹಿತರು ಮತ್ತು ನನ್ನ ಭಾವನೆಗಳು' ಎನ್ನುವ ವಿಷಯವನ್ನು ಒಳಗೊಂಡಿತ್ತು.<br>ರೋಹನ್ ಓರ್ವ ಸ್ನೇಹಪರ ಮತ್ತು ಸಕ್ರಿಯ ಹುಡುಗನಾಗಿದ್ದು ಅವನು ಎಲ್ಲಾ ಆಟದ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದಾನೆ. ಪಝಲ್‌ಗಳು, ಬ್ಲಾಕ್‌ಗಳೊಂದಿಗೆ ಉತ್ತಮವಾಗಿ ತೊಡಗಿಕೊಳ್ಳುತ್ತಾನೆ ಮತ್ತು ಸೃಜನಶೀಲ ಚಟುವಟಿಕೆಗಳನ್ನು ಇಷ್ಟಪಡುತ್ತಾನೆ.<br>ಆದರೆ ಅವನು ಸುಲಭವಾಗಿ ವಿಚಲಿತಗೊಳ್ಳುತ್ತಾನೆ . ಕಥೆ ಹೇಳುವುದು ಮತ್ತು ಇತರ ಮೌಖಿಕ ಚಟುವಟಿಕೆಗಳಲ್ಲಿ, ಸಂಭಾಷಣೆಗಳಲ್ಲಿ ಗಮನವಹಿಸಲು ಕಷ್ಟಪಡುತ್ತಾನೆ. ಸಂಭಾಷಣೆಯ ಸಮಯದಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಅವನ ಪ್ರತಿಕ್ರಿಯೆಗಳು ವಿರಳ. ಆದರೆ ಸೃಜನಶೀಲ ಚಲನೆಯ ತರಗತಿಯಲ್ಲಿ ಭಾವನೆಗಳನ್ನು ಅಭಿನಯ ಮಾಡಲು ಹೆಚ್ಚಿನ ಆಸಕ್ತಿಯನ್ನು ತೋರಿದನು.<br>ಪ್ರತಿದಿನ ರಾತ್ರಿ ನೀವು ಅವನಿಗೆ ಒಂದು ಕಥೆಯನ್ನು ಓದಲು / ಹೇಳಲು ಸಾಧ್ಯವಾದರೆ ಒಳ್ಳೆಯದು, ಇದರಿಂದ ಅವನು ಆಪ್ತವಾಗಿರುವ ವಯಸ್ಕರೊಂದಿಗೆ ಮುಖಾಮುಖಿ ಸಂಭಾಷಣೆಯಲ್ಲಿ ತೊಡಗಿಕೊಳ್ಳಲು ಕಲಿಯುತ್ತಾನೆ. |

- ರಾಹುಲ್ ಮತ್ತು ರೋಹನ್ ಇಬ್ಬರೂ ಮಕ್ಕಳ ತಾಯಂದಿರು ತಮ್ಮ ಮಕ್ಕಳ ಬಗ್ಗೆ ಶಿಕ್ಷಕರ ಮಾತುಗಳನ್ನು ಕೇಳಿ ಹೀಗೆ ಆಲೋಚಿಸಿದರು.

1. ಸರಿ, ಅವನು ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿಲ್ಲ -ಅವನು ಎಂಎಫ್ ಹುಸೇನ್ ಆಗಬೇಕೆನ್ನುವುದೇನು ನನ್ನ ಇಚ್ಛೆಯಲ್ಲ. ಮುಖ್ಯವಾಗಿ ಅವನು ತರಗತಿಯಲ್ಲಿ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಅವಕ್ಕೆ ಉತ್ತರಿಸುತ್ತಿದ್ದಾನೆ! ಅವನು ಅರ್ಥಮಾಡಿಕೊಂಡರೆ ಸಾಕು.
2. ಅಯ್ಯೋ ದೇವರೇ, ನನ್ನ ಮಗು ಗಮನ ಹರಿಸುತ್ತಿಲ್ಲ. ಅವನು ಉನ್ನತ ತರಗತಿಗಳಿಗೆ ಹೋದಾಗ ಏನು ಮಾಡುತ್ತಾನೆ? ನಾನು ಈ ಆಟಿಕೆಗಳನ್ನೆಲ್ಲ ಖರೀದಿಸುವುದನ್ನು ನಿಲ್ಲಿಸಬೇಕು ಮತ್ತು ಪುಸ್ತಕಗಳನ್ನು ಮಾತ್ರ ಖರೀದಿಸಬೇಕು. ಈ ಎಲ್ಲಾ ಪುಸ್ತಕಗಳನ್ನು ಅವನಿಗೆ ಓದಿ ಅವನು ಅವಕ್ಕೆ ಗಮನ ಕೊಡುವಂತೆ ಒತ್ತಾಯಿಸಬೇಕು

**ಈ ತಾಯಂದರಿಗೆ ನೀವು ಏನು ಸಲಹೆಯನ್ನು ನೀಡುತ್ತೀರ?**

# ಸೂತ್ರ 3: ಮಕ್ಕಳು ಜ್ಞಾನವನ್ನು ನಿರ್ಮಿಸುವ ಮೂಲಕ ಕಲಿಯುತ್ತಾರೆ. ಜ್ಞಾನವು, ಗಮನಿಸುವಿಕೆ, ಪರಸ್ಪರ ಒಡನಾಟ, ಪುನರಾವರ್ತನೆ, ಅಭಿವ್ಯಕ್ತಿ ಮತ್ತು ನೇರ ಸೂಚನೆಗಳ ಮೂಲಕ ನಿರ್ಮಾಣಗೊಳ್ಳುತ್ತದೆ.

- ಮಕ್ಕಳು ನೇರ ಸೂಚನೆಗಳ ಮೂಲಕ ಕಲಿಯುತ್ತಾರೆ, ಆದರೆ ತಮಗೆ ತಾವೇ ನಿರ್ಮಿಸಿಕೊಳ್ಳುವ ವಿಚಾರಗಳ ಕಲಿಕೆಯನ್ನು ಉತ್ತಮವಾಗಿ ಅರಿತುಕೊಳ್ಳುತ್ತಾರೆ.
- ಜ್ಞಾನದ ನಿರ್ಮಾಣವು ಅನೇಕ ಮಾರ್ಗಗಳ ಮೂಲಕ ನಡೆಯುತ್ತದೆ. ಅದು, ವೀಕ್ಷಣೆ ಮತ್ತು ಪರಿಶೋಧನೆ, ಪುನರಾವರ್ತನೆ ಮತ್ತು ಅಭಿವ್ಯಕ್ತಿಗಳನ್ನು ಒಳಗೊಂಡಿರುತ್ತದೆ.
- ಜ್ಞಾನದ ನಿರ್ಮಾಣದಲ್ಲಿ ವೀಕ್ಷಣೆ ಒಂದು ಪ್ರಮುಖ ಕೌಶಲ್ಯವಾಗಿದೆ. ಮಕ್ಕಳು ಒಂದು ಸಾಮಾಜಿಕ ವರ್ತನೆಯ ವೀಕ್ಷಣೆಯನ್ನು ಮಾಡುವಾಗ, ಅದನ್ನು ಗಮನಿಸಿ, ನೆನಪಿಟ್ಟುಕೊಂಡು ಅದೇ ನಡವಳಿಕೆಯನ್ನು ನಕಲು ಮಾಡಿ  ಆ ಮೂಲಕ ಸಾಮಾಜಿಕ ವರ್ತನೆಯನ್ನು ಕಲಿಯುತ್ತಾರೆ.

# ಸೂತ್ರ 3: ಮಕ್ಕಳು ಜ್ಞಾನವನ್ನು ನಿರ್ಮಿಸುವ ಮೂಲಕ ಕಲಿಯುತ್ತಾರೆ. ಜ್ಞಾನವು, ಗಮನಿಸುವಿಕೆ, ಪರಸ್ಪರ ಒಡನಾಟ, ಪುನರಾವರ್ತನೆ, ಅಭಿವ್ಯಕ್ತಿ ಮತ್ತು ನೇರ ಸೂಚನೆಗಳ ಮೂಲಕ ನಿರ್ಮಾಣಗೊಳ್ಳುತ್ತದೆ.

- ವೀಕ್ಷಣೆ ಮತ್ತು ಪರಿಶೋಧನೆಯು ಅರಿವಿನ ಕಲಿಕೆಯನ್ನು ಸಹ ಬೆಂಬಲಿಸುತ್ತದೆ. ಮಕ್ಕಳು ತಮ್ಮ ಪರಿಸರದಲ್ಲಿ ನೋಡುವ ವಿಷಯಗಳನ್ನು ಗುರುತಿಸಲು, ಹೋಲಿಸಲು, ವಿಶ್ಲೇಷಿಸಲು ಮತ್ತು ನೆನಪಿಸಿಕೊಳ್ಳಲು ತಮ್ಮ ಇಂದ್ರಿಯಗಳನ್ನು ಬಳಸುತ್ತಾರೆ.
- ಕೆಲಸಗಳನ್ನು ಪದೇಪದೇ ಮಾಡುವ ಮೂಲಕ ಮಕ್ಕಳು ಕಲಿಯುತ್ತಾರೆ.
- ತಮ್ಮ ಕೆಲಸಗಳು ಮತ್ತು ಆಲೋಚನೆಯ ವಿವರಣೆ ನೀಡುವುದು ಜ್ಞಾನ ನಿರ್ಮಾಣದ ಮತ್ತು ಸ್ಪಷ್ಟಪಡಿಸುವ ಪ್ರಕ್ರಿಯೆಯ ಒಂದು ಪ್ರಮುಖ ಭಾಗವಾಗಿದೆ. ಅರ್ಥಪೂರ್ಣ ಸಂವಾದವು ಮಕ್ಕಳ ಆಲೋಚನೆಗಳನ್ನು ಪದಗಳಾಗಿ ಪರಿವರ್ತಿಸುವ ಮೂಲಕ ಅವರ ಶಬ್ದಕೋಶಕ್ಕೆ ಸಹಾಯ ಮಾಡುತ್ತದೆ ಮತ್ತು ಅವರ ಆಲೋಚನೆಯನ್ನು ಸ್ಪಷ್ಟಪಡಿಸಲು ಮತ್ತು ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

## ಪಠ್ಯಕ್ರಮ ಸೂಚ್ಯಗಳು:

ಪಠ್ಯಕ್ರಮವು ಮಕ್ಕಳಿಗೆ ತಮ್ಮದೇ ಆದ ಜ್ಞಾನವನ್ನು ನಿರ್ಮಿಸಲು ಸಹಾಯ ಮಾಡುವ ಸಲುವಾಗಿ ಅಭಿವೃದ್ಧಿಗೆ ಸೂಕ್ತವಾದ ವಸ್ತುಗಳು, ಅನುಭವಗಳು ಮತ್ತು ಸವಾಲುಗಳನ್ನು ಒದಗಿಸುವಂತೆ ಖಚಿತಪಡಿಸಿಕೊಳ್ಳಬೇಕು. ಬೋಧನಾ ವಿಧಾನದಲ್ಲಿ ಬಳಸಲಾಗುವ ಹಲವು ತಂತ್ರಗಳಲ್ಲಿ ನೇರ ಸೂಚನೆಯು ಒಂದಾಗಿರಬೇಕು.

## ಜ್ಞಾನ ನಿರ್ಮಾಣದಲ್ಲಿ ಆಟ ಮತ್ತು ಚಟುವಟಿಕೆಗಳು ಪ್ರಾಥಮಿಕ ಮಾಧ್ಯಮವಾಗಿವೆ.

- ಒಂದು ಆಟ ಮತ್ತು ಚಟುವಟಿಕೆ ಆಧಾರಿತ ಪಠ್ಯಕ್ರಮವು ಮಕ್ಕಳಿಗೆ ಪರಿಸರವನ್ನು ಅನ್ವೇಷಿಸಲು, ಪ್ರಯೋಗಿಸಲು, ಬಳಸಲು ಮತ್ತು ಅನುಭವಿಸಲು ಅವಕಾಶಗಳನ್ನು ನೀಡುತ್ತದೆ ಇದರಿಂದ ಮಕ್ಕಳು ತಮ್ಮ ಜ್ಞಾನವನ್ನು ನಿರ್ಮಿಸಿಕೊಳ್ಳುತ್ತಾರೆ.

## ಪಠ್ಯಕ್ರಮ ಸೂಚ್ಯಗಳು:

- ಪಠ್ಯಕ್ರಮವು ವಿವಿಧ ರೀತಿಯ ಆಟಗಳಾದ ಮುಕ್ತ ಮತ್ತು ಸೂಚಿತ, ಸಕ್ರಿಯ ಮತ್ತು ನಿಷ್ಕ್ರಿಯ, ಒಳಾಂಗಣ ಮತ್ತು ಹೊರಾಂಗಣ, ಮತ್ತು ರಚಿತ ಮತ್ತು ರಚನಾರಹಿತ ಆಟಗಳ ಸಮತೋಲನವನ್ನು ಹೊಂದಿರಬೇಕು. ಅವರ ಆಸಕ್ತಿ ಮತ್ತು ಆಯ್ಕೆಗಳಿಂದ ಹೊರಹೊಮ್ಮುವ ಅವರೇ ಪ್ರಾರಂಭಿಸುವ ಆಟ / ಚಟುವಟಿಕೆಗಳಿಗೆ ಅವಕಾಶಗಳನ್ನು ನೀಡಬೇಕು.

## ಮಕ್ಕಳ ಕಲಿಕೆಗೆ ವಯಸ್ಕರು ಮತ್ತು ಇತರ ಮಕ್ಕಳೊಂದಿಗೆ ಸ್ಪಂದಿಸುವ ಮತ್ತು ಬೆಂಬಲಿಸುವ ಸಂವಹನ ಅತ್ಯಗತ್ಯ.

- ಮಕ್ಕಳು ತಮ್ಮ ಪರಿಸರದೊಂದಿಗೆ ಸಕ್ರಿಯ ಮತ್ತು ನೇರ ಅನುಭವಗಳ ಮೂಲಕ ಕಲಿಯುತ್ತಾರೆ. ಇದು ಶಿಕ್ಷಕರು ಮತ್ತು ಗೆಳೆಯರೊಂದಿಗಿನ ಪರಸ್ಪರ ಒಡನಾಟ ಮತ್ತು ಮಾರ್ಗದರ್ಶನದೊಂದಿಗೆ ಅವರ ಜ್ಞಾನ ನಿರ್ಮಾಣಕ್ಕೆ ಸಹಾಯ ಮಾಡುತ್ತದೆ.
- ಮಕ್ಕಳು ತಮ್ಮ ತಂದೆ ತಾಯಿ, ಪೋಷಕರು, ಕುಟುಂಬಗಳು, ಶಿಕ್ಷಕರು ಮತ್ತು ಸಮುದಾಯಗಳೊಂದಿಗೆ ಹೊಂದಿರುವ ಸಂಬಂಧಗಳ ಮೂಲಕ ಕಲಿಯುತ್ತಾರೆ.
- ಪರಸ್ಪರ ಒಡನಾಟವು (ಮಗು-ಮಗು, ಮಗು-ಶಿಕ್ಷಕಿ, ಮತ್ತು ಮಗು-ಮೆಟೀರಿಯಲ್) ಒಳ್ಳೆಯ ಗುಣಮಟ್ಟದ ಶಾಲಾಪೂರ್ವ ಶಿಕ್ಷಣಕ್ಕೆ ಅವಶ್ಯಕವಾದ ಪ್ರಮುಖ ಅಂಶವಾಗಿದೆ.
- ಮಕ್ಕಳ ನಡುವಿನ ಸಂವಹನ, ಅರ್ಥಪೂರ್ಣ ಮಾತುಕತೆಯೊಂದಿಗೆ ಒದಗುವ ಪರಿಸರ ಮತ್ತು ಸಾಂಸ್ಕೃತಿಕ ಅನುಭವಗಳ ವ್ಯಾಪ್ತಿಯು ಮಕ್ಕಳಿಗೆ ಧೃಡವಾದ ಜ್ಞಾನದ ಅಡಿಪಾಯವನ್ನು ನಿರ್ಮಿಸಿ ಸಾಂಪ್ರದಾಯಿಕ ಶಿಕ್ಷಣಕ್ಕಾಗಿ ಅವರನ್ನು ತಯಾರು ಮಾಡಲು ಸಹಾಯ ಮಾಡುತ್ತದೆ.

# ಪಠ್ಯಕ್ರಮ ಸೂಚ್ಯಗಳು:

- ಪಠ್ಯಕ್ರಮವು ಆಟ ಮತ್ತು ಚಟುವಟಿಕೆಯನ್ನು ಆಧರಿಸಿರಬೇಕು. ಒಳಾಂಗಣ ಮತ್ತು ಹೊರಾಂಗಣ ಪರಿಸರ, ಶಿಕ್ಷಕರು ಮತ್ತು ಗೆಳೆಯರೊಂದಿಗೆ ಒಡನಾಟದ ಮೂಲಕ ಸಂವಾದಾತ್ಮಕ ವಾತಾವರಣವನ್ನು ಸೃಷ್ಟಿಸುವ ಅವಕಾಶಗಳನ್ನು ಇದು ಒದಗಿಸಬೇಕು.
- ಪಠ್ಯಕ್ರಮವು ಶಾಲಾಪೂರ್ವದ ಅವಧಿಯಲ್ಲಿ ವಯಸ್ಕರ ಬೆಂಬಲಯುತ ಮತ್ತು ಮೇಲ್ವಿಚಾರಕ ಪಾತ್ರವನ್ನು ನಿಗದಿಪಡಿಸುವುದರೊಂದಿಗೆ ಪೋಷಕರ ಪಾಲ್ಗೊಳ್ಳುವಿಕೆ ಮತ್ತು ಬೆಂಬಲವನ್ನೂ ಖಚಿತಪಡಿಸಿಕೊಳ್ಳಬೇಕು

## ಆಲೋಚಿಸಿ:
## ಹಿರಿಯ ಶಿಶುವಿಹಾರದ (ಅಪ್ಪರ್ ಕಿಂಡರ್‌ಗಾರ್ಟನ್) ಪ್ರಯೋಗಗಳ ಒಂದು ಸರಣಿಯನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ಎಚ್ಚರಿಕೆಯಿಂದ ಓದಿ ಮತ್ತು ಎ) ಮಕ್ಕಳ ಜ್ಞಾನ ನಿರ್ಮಾಣವನ್ನು ವಿವರಿಸಿ ಮತ್ತು ಬಿ) ಜ್ಞಾನವನ್ನು ನಿರ್ಮಿಸಲು ಮಕ್ಕಳು ಬಳಸುತ್ತಿರುವ ಅರಿವಿನ ಕೌಶಲ್ಯಗಳನ್ನು ವಿವರಿಸಿ

- 1. ಮಕ್ಕಳಿಗೆ ಕೈಯಲ್ಲಿ ಹಿಡಿಯಲು 3 ವಸ್ತುಗಳನ್ನು (ಒಣ ಎಲೆ / ಬ್ಲಾಕ್ / ಕಾಗದ / ಕಲ್ಲು) ನೀಡಲಾಗುತ್ತದೆ. ಅವರು ಭಾರವಾದ ವಸ್ತುಗಳನ್ನು ಕಾಗದ ಎ ಮತ್ತು ಹಗುರವಾದ ವಸ್ತುಗಳನ್ನು ಕಾಗದ ಬಿ ಮೇಲೆ ಇಡುತ್ತಾರೆ. ಅವರು ಪ್ರತಿಯೊಂದು ವಸ್ತುವನ್ನು ನೀರಿನಿಂದ ತುಂಬಿರುವ ಬಕೆಟ್‌ನಲ್ಲಿ ಎಸೆಯುತ್ತಾರೆ ಮತ್ತು ಅದು ಏನಾಗುತ್ತದೆ ಎಂದು ನೋಡುತ್ತಾರೆ. ಇಲ್ಲಿ ಅವರು ಯಾವ ಜ್ಞಾನವನ್ನು ನಿರ್ಮಿಸುತ್ತಿದ್ದಾರೆ? ಅವರು ಬಳಸುತ್ತಿರುವ ಕೌಶಲ್ಯಗಳನ್ನು ನೀವು ಹೇಳಬಹುದೆ (ಇಂದ್ರಿಯಗಳು, ವೀಕ್ಷಣೆ, ಪರಿಶೋಧನೆ)

- 2. ಮಕ್ಕಳಿಗೆ ಈ ಕೆಳಗಿನ ಚಿತ್ರವನ್ನು ತೋರಿಸಲಾಗುತ್ತದೆ (ಪೊಲೀಸ್ ಕಳ್ಳನಿಗೆ ಸೂಜಿ ಚುಚ್ಚುತ್ತಿರುವ ಚಿತ್ರ) ಮತ್ತು ಈ ಚಿತ್ರದಲ್ಲಿ ಏನು ತಪ್ಪಾಗಿದೆ ಎಂದು ವಿವರಿಸಲು ಕೇಳಲಾಗುತ್ತದೆ. ಅವರು ಇಲ್ಲಿ ಯಾವ ಜ್ಞಾನವನ್ನು ಬಳಸುತ್ತಿದ್ದಾರೆ? ಶಿಕ್ಷಕರು ಅವರಿಗೆ ಉತ್ತರವನ್ನು ನೀಡಬೇಕೆ? ಶಿಕ್ಷಕಿಯು ಮಕ್ಕಳನ್ನು ಉತ್ತರದ ಕಡೆಗೆ ಹೇಗೆ ಕರೆದೊಯ್ಯಬಹುದು?

- 3. ಮಕ್ಕಳು ಪ್ರಕೃತಿ ವಿಹಾರಕ್ಕೆ ಹೋಗುತ್ತಾರೆ ಮತ್ತು ವಿವಿಧ ಗಿಡಗಳಿಂದ ಎಲೆಗಳನ್ನು ಹೊಂದಿರುವ ಕೊಂಬೆಗಳನ್ನು ಸಂಗ್ರಹಿಸುತ್ತಾರೆ. ಚರ್ಚೆಯ ಸಮಯದಲ್ಲಿ ನೀವು ಅವರಿಗೆ ಯಾವ ಜ್ಞಾನವನ್ನು ಪಡೆಯಲು ಸಹಾಯ ಮಾಡಬಹುದು. ವಯಸ್ಕರ ಒಡನಾಟ ಇಲ್ಲಿ ಏಕೆ ಅಗತ್ಯವಾಗುತ್ತದೆ?

- 4. ಮಕ್ಕಳು ಸ್ವಾತಂತ್ರ್ಯ ದಿನಾಚರಣೆಯ ಅಭಿನಯ ಮಾಡುತ್ತಾರೆ. ಅಭಿನಯದ ನಂತರ ಅವರು ಯಾವ ಜ್ಞಾನವನ್ನು ನಿರ್ಮಿಸಿಕೊಳ್ಳುತ್ತಾರೆ? ಪಠ್ಯಪುಸ್ತಕದಿಂದ ಮಾಹಿತಿಯನ್ನು ಹೇಳುವುದಕ್ಕಿಂತ ಈ ಮಾರ್ಗವು ಉತ್ತಮವೆ? ಏಕೆ?
- 5. ಮಕ್ಕಳು ಮಗ್ ಸಹಾಯದಿಂದ ಬಕೆಟ್‌ಗೆ ನೀರನ್ನು ತುಂಬಿಸುತ್ತಾರೆ. ಹಿರಿಯ ಮಕ್ಕಳು ಅಳತೆ ಮಾಡುವ ಕಪ್ ಮತ್ತು ಮೂರು ವಿಭಿನ್ನ ಗಾತ್ರದ ಪ್ಲಾಸ್ಟಿಕ್ ಬಾಟಲಿಗಳನ್ನು ಬಳಸುತ್ತಾರೆ. ಮಕ್ಕಳು ಇಲ್ಲಿ ಯಾವ ಜ್ಞಾನವನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ?
- 6. ಮಕ್ಕಳ ಹತ್ತಿರ ಎರಡು-ಮೂರು ಶುದ್ಧ ನೀರನ್ನು ಹೊಂದಿರುವ ಗಾಜಿನ ಲೋಟಗಳಿವೆ. ಶಿಕ್ಷಕರು ಪ್ರತಿ ಗಾಜಿನ ಲೋಟದ ಒಳಗೆ ಆಹಾರ ಬಣ್ಣವನ್ನು (ಕೆಂಪು, ಹಳದಿ, ಹಸಿರು ಮತ್ತು ನೀಲಿ) ಸೇರಿಸುತ್ತಾರೆ. ಇಲ್ಲಿ ಮಕ್ಕಳು ಯಾವ ಜ್ಞಾನವನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ? ಅವರು ಯಾವ ಕೌಶಲ್ಯಗಳನ್ನು ಬಳಸುತ್ತಿದ್ದಾರೆ?

## ಸೂತ್ರ 4: ಕಲಿಕೆಯು ಬೆಳವಣಿಗೆಗೆ ಸೂಕ್ತವಾಗಿರಬೇಕು, ಸಂದರ್ಭಕ್ಕೆ ಪ್ರಸ್ತುತವಾಗಿರಬೇಕು ಮತ್ತು ಸಾಂಸ್ಕೃತಿಕವಾಗಿ ಸೂಕ್ತವಾಗಿರಬೇಕು.

- ಮಾತೃಭಾಷೆಯಲ್ಲಿ ನಡೆಸುವ ಶಾಲಾಪೂರ್ವ ಕಾರ್ಯಕ್ರಮಕ್ಕೆ ಹಾಜರಾಗುವ ಮಕ್ಕಳು ಗ್ರಹಿಕೆಯಲ್ಲಿ ಕಡಿಮೆ ಸಮಸ್ಯೆಗಳನ್ನು ಎದುರಿಸುತ್ತಾರೆ ಎಂದು ಸಂಶೋಧನೆ ತೋರಿಸುತ್ತದೆ. ಮಕ್ಕಳ ಮಾತೃಭಾಷೆ ಮೂಲಕ ನಡೆಯುವ ಬೋಧನೆಯು ಪರಿಕಲ್ಪನೆಯ ರಚನೆಯ ಆರಂಭಿಕ ವರ್ಷಗಳಲ್ಲಿ ಮಕ್ಕಳಿಗೆ ನೆರವಾಗುವ ಅತ್ಯಂತ ಸೂಕ್ತವಾದ ಮಾರ್ಗವೆಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದೆ. ಆದಾಗ್ಯೂ ಮಕ್ಕಳನ್ನು ಹಲವು ಭಾಷೆಗಳಿಗೆ ಪರಿಚಯಿಸಬಹುದು.
- ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳ ಬಳಕೆಯು ಕಲಿಕೆಯ ಅವಕಾಶಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ: ಇದು ಸ್ಥಳೀಯ ಮೌಲ್ಯಗಳು ಮತ್ತು ಸಾಂಸ್ಕೃತಿಕ ಗುರುತನ್ನು ಸಹ ಕಾಪಾಡುತ್ತದೆ. ಅಷ್ಟೇ ಅಲ್ಲದೆ, ಬೋಧನೆ-ಕಲಿಕೆಯ ಪ್ರಕ್ರಿಯೆಯಲ್ಲಿ ಪೋಷಕರು ಮತ್ತು ಸಮುದಾಯವು ಸಕ್ರಿಯವಾಗಿ ಹಾಗು ರಚನಾತ್ಮಕವಾಗಿ ಪಾಲ್ಗೊಳ್ಳಲು ಅವಕಾಶವನ್ನು ಒದಗಿಸುತ್ತದೆ.

## ಸೂತ್ರ 4: ಕಲಿಕೆಯು ಬೆಳವಣಿಗೆಗೆ ಸೂಕ್ತವಾಗಿರಬೇಕು, ಸಂದರ್ಭಕ್ಕೆ ಪ್ರಸ್ತುತವಾಗಿರಬೇಕು ಮತ್ತು ಸಾಂಸ್ಕೃತಿಕವಾಗಿ ಸೂಕ್ತವಾಗಿರಬೇಕು.

- ಪ್ರತಿಯೊಂದು ಶೈಕ್ಷಣಿಕ ಅನುಭವ ಮತ್ತು ಚಟುವಟಿಕೆಯಲ್ಲಿ ಎಲ್ಲಾ ಮಕ್ಕಳನ್ನು ಸಂಪೂರ್ಣವಾಗಿ ಸೇರಿಸಿಕೊಳ್ಳುವುದು ಅತ್ಯಗತ್ಯ. ವಿಕಲಾಂಗ ಮಕ್ಕಳಿಗೆ ತಮ್ಮ ಕೌಶಲ್ಯಗಳನ್ನು, ನಡವಳಿಕೆಗಳನ್ನು ಮತ್ತು ಪರಿಕಲ್ಪನೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಕಲಿಯಲು ಹೆಚ್ಚು ವೈಯಕ್ತಿಕ ಸೂಚನೆಗಳು ಅಗತ್ಯವಾಗಬಹುದು.
- ಪೋಷಕರ ಮತ್ತು ಕುಟುಂಬದವರ ಪಾಲ್ಗೊಳ್ಳುವಿಕೆಯು ಮಕ್ಕಳ ಕಲಿಕೆಯಲ್ಲಿ ಮತ್ತು ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

## ಪಠ್ಯಕ್ರಮ ಸೂಚ್ಯಗಳು:

- ಕಾರ್ಯಕ್ರಮವು ಎಲ್ಲರನ್ನೂ ಒಳಗೊಳ್ಳಬೇಕು ಮತ್ತು ವಿಶೇಷ ಕಾಳಜಿಯ ಅಗತ್ಯವಿರುವ ಮಕ್ಕಳ ಅವಶ್ಯಕತೆಗಳನ್ನು ಪೂರೈಸಲು ಬೇಕಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.
- ಪ್ರಮುಖ ಚಟುವಟಿಕೆಗಳನ್ನು ಮಾತೃಭಾಷೆಯಲ್ಲಿ ಪರಿಚಯಿಸಲಾಗುವುದು, ಆದರೆ ಮಕ್ಕಳಿಗೆ ಇತರ ಭಾಷೆಗಳನ್ನೂ ಪರಿಚಯಿಸಲಾಗುವುದು.
- ಪ್ರಾಜೆಕ್ಟ್‌ಗಳ ಮೂಲಕ ಪೋಷಕರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುವುದು.
- ಪಠ್ಯಕ್ರಮವು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಅಲ್ಲಿನ ಸಾಂಸ್ಕೃತಿಕ ಸಂದರ್ಭಕ್ಕೆ ತಕ್ಕಂತೆ ಬಳಸಬೇಕು.

## ಆಲೋಚಿಸಿ:

- ಕೆಳಗಿನ ಪ್ರತಿಯೊಂದು ಹೇಳಿಕೆಗಳು ಪರ್ವ ಶಿಕ್ಷಣದ ಬಗ್ಗೆ ಇರುವ ದೃಷ್ಟಿಕೋನವನ್ನು ವ್ಯಕ್ತಪಡಿಸುತ್ತವೆ. ECE ತತ್ವಗಳು ಮತ್ತು ಪಠ್ಯಕ್ರಮದ ಸೂಚ್ಯಗಳ ಬೆಳಕಿನಲ್ಲಿ ಈ ಹೇಳಿಕೆಗಳನ್ನು ಚರ್ಚಿಸಿ. ಪ್ರತಿ ಗುಂಪು ಒಂದು ಹೇಳಿಕೆಯನ್ನು ಚರ್ಚಿಸಬೇಕು.

1. ನನ್ನ ಮಗುವಿಗೆ ಪ್ರಿಸ್ಕೂಲ್ ಹುಡುಕುವಾಗ, ನನ್ನ ಮಗು ಚಿಕ್ಕ ವಯಸ್ಸಿನಲ್ಲಿಯೇ ಇಂಗ್ಲಿಷ್ ಭಾಷೆಗೆ ಪರಿಚಯವಾಗಬೇಕೆಂದು ನಾನು ಕೈಗೆಟುಕುವ ಶುಲ್ಕ ಪಡೆಯುವ ಇಂಗ್ಲಿಷ್ ಮಾಧ್ಯಮದ ECE ಕಾರ್ಯಕ್ರಮಕ್ಕಾಗಿ ಹುಡುಕುತ್ತೇನೆ.
2. ECE ಕಾರ್ಯಕ್ರಮಕ್ಕಾಗಿ ನಾನು ನನ್ನ ಹಣವನ್ನು ಅಥವಾ ಸಮಯವನ್ನು ವ್ಯರ್ಥ ಮಾಡಲು ಹೋಗುವುದಿಲ್ಲ ಏಕೆಂದರೆ ಈ ವಯಸ್ಸಿನಲ್ಲಿ ಮಕ್ಕಳು ಹೆಚ್ಚು ಕಲಿಯುವುದಿಲ್ಲ. ದಿನಕ್ಕೆ ಕೆಲವು ಗಂಟೆಗಳ ಕಾಲ ಮಗುವನ್ನು ಕಾರ್ಯನಿರತವಾಗಿ ಇರಿಸುವ ಯಾವ ಶಾಲೆಯಾದರೂ ಪರವಾಗಿಲ್ಲ.
3. ಈ ಶಾಲೆಯು ನನ್ನ ಮಗುವಿಗೆ ಒಳ್ಳೆಯದು ಏಕೆಂದರೆ ಅದು ಎಲ್ಲಾ ಆಧುನಿಕ ಮೆಟೀರಿಯಲ್‌ಗಳನ್ನು ಬಳಸುತ್ತದೆ ಮತ್ತು ಕಂಪ್ಯೂಟರ್ ಶಿಕ್ಷಣವನ್ನೂ ನೀಡುತ್ತದೆ.
4. ಶಾಲೆಯ ಕಟ್ಟಡ, ಪೀಠೋಪಕರಣಗಳು ಮತ್ತು ಹೊರಾಂಗಣ ಮೈದಾನವು ಆಕರ್ಷಕವಾಗಿ ಕಾಣುತ್ತವೆ ಮತ್ತು ಶಿಕ್ಷಕರು ಸ್ಮಾರ್ಟ್‌ಆಗಿ ಕಾಣುತ್ತಾರೆ. ಇಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮವಾಗಿರಬೇಕು.